R No KRNN 12

26 - 2 - 1975

ಸ್ವರ್ಣ ಮಹೋತ್ಸವ ನೆರವೇರಿದ ದಶಕ

in ★ ★ ★ ★ ★

58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee
Celebrated Paper
Satyavadi Daily
Mysore 4
- For Influential Publicity -

ಸಂಸ್ಥಾಪಕರು ಆರಮನೆ ಶಿರಸ್ತೇದಾರ್ ಎಂ. ವಿ. ಕುಪ್ಪಣ್ಣಾವ್ ಸಾದರರು ವರ್ಮಸ್ಯ ಜಾರಿವಿರತ ಎಂ. ಎಸ್. ಕೃಷ್ಣಾವ್ (3 ಸ್ಥಳ

ಅಮೇರಿಕ ತಪ್ಪು ಹೆಜ್ಜೆ ಇಟ್ಟಿದೆ

ಪ ಜ ಪ

ನೇತಾಕಪ ಪದ್ಧತಿ ಹೋಗುವದಾ

ಗೌರವ ಮೆಡಿಕಲ್ ಆಫೀಸರುಗಳು ಮತ್ತು ಗೌರವ ಅಸಿಸ್ಟೆಂಟ್ ಮೆಡಿಕಲ್ ಆಫೀಸರ್‌ಗಳು ಈ ಹುದ್ದೆಗಳು 77 ನೇ ಇಸವಿ ವೇಳೆಗೆ ರದ್ದಾಗುವದಾಗಿ ವಿಧಾನ ಪರಿಷತ್ತಿನಲ್ಲಿ ಆರೋಗ್ಯ ಮಂತ್ರಿ ಶ್ರೀ ಸಿದ್ಧವೀರಪ್ಪನವರು ತಿಳಿಸಿದರು

● ಇಜಕೋಟೆಯಿಂದ ಬಂದಿರುವ ವರದಿಯಂತೆ ರೂ 2 ಲಕ್ಷ ಬೆಲೆಯ ಗೊಬ್ಬರ ಬೆಂಕಿ ಅನಾಹುತದಲ್ಲಿ ನಾಶವಾಗಿದೆ

ಪ್ರಾಜೆಕ್ಟ್ ಟೈಗರ್ ಡೆಪ್ಯುಟಿ ಡೈರೆಕ್ಟರ್‌ರವರ ಕಚೇರಿ, ಮೈಸೂರು

ಟೆಂಡರ್ ಪ್ರಕಟಣೆ

ನಂ. ಡಿಡಿ ಪಿಜೆಟಿ-ಇಎಸ್‌ಟಿ 1/74-75 ತಾ|| 12-2-75

ಟೆಂಡರ್‌ದಾರರಿಂದ ಮೊಹರು ಮಾಡಿದ ಸೂಕ್ತ ರೀತಿಯಲ್ಲಿ ಸಹಿ ಮಾಡಲಾದ ಮತ್ತು ಹೆಸರಿಸಿ ಬರೆದ ಮೊಹರಾದ ಟೆಂಡರ್‌ಗಳನ್ನು ಹೆಡ್ಕ್ವಾರ್ಟರ್‌ನಲ್ಲಿ ನಮೂದಿಸಿಕೊಳ್ಳುವ ಕೆಲಸಕ್ಕಾಗಿ ರಿಜಿಸ್ಟರ್ ಆದ ಕಂಟ್ರಾಕ್ಟರ್‌ಗಳಿಂದ ಮೈಸೂರಿನಲ್ಲಿರುವ ಪ್ರಾಜೆಕ್ಟ್ ಟೈಗರ್ ಡೆಪ್ಯುಟಿ ಡೈರೆಕ್ಟರ್‌ರವರು 28-2-75 ರ ಮಧ್ಯಾಹ್ನ 4 ಗಂಟೆ ವರೆಗೆ ಸ್ವೀಕರಿಸುವರು. ಸ್ವೀಕೃತವಾದ ಟೆಂಡರ್‌ಗಳನ್ನು ಟೆಂಡರ್‌ದಾರರ ಅಥವಾ ಅವರ ಪ್ರತಿನಿಧಿಗಳವರ ಮುಂದೆ ಅದೇ ದಿನ ಸಂಜೆ 4-50 ಗಂಟೆಗೆ ಸಂದರ್ಭಾನುಸಾರ ಒಡೆಯಲಾಗುವುದು.

ಹೆಡ್ಕ್ವಾರ್ಟರ್

ಕೆಲಸಗಳ ಬಗೆ	ಅಂದಾಜು ಹಣ	ಇಎಂಡಿ	ಕಾಲಾವಧಿ
1 ಬಂಗಾರಪುರದ ವನ್ಯ ಜೀವಿ ಧಾಮದಲ್ಲಿರುವ ವನಶ್ರೀ ಲಾಡ್ಜ್ ಇದಕ್ಕೆ ವಿಶೇಷ ರಿಪೇರಿಗಳನ್ನು ಮಾಡುವುದು	ರೂ 9,500	ರೂ 500-00	31-3-75

ಸೂಚನೆ :—

1 ಕೆಲಸದ ಎದುರು ಸೂಚಿಸಿರುವ ಅರ್ನೆಸ್ಟ್ ಹಣ ಠೇವಣಿಯನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ಇಲ್ಲಿಗೆ ಪಾವತಿ ಮಾಡಬೇಕು ಮತ್ತು ದ್ವಿಪ್ರತಿ ಚಲನ್ ಅನ್ನು ಟೆಂಡರ್‌ಗೆ ಸೇರಿಸಬೇಕು ಅಥವಾ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ಇವರ ಡಿ. ಡಿ. ಯನ್ನು ಸೇರಿಸಬೇಕು

2 ರೂ 5 ಪ್ಲಸ್ ಪೂರಾಂಟೆ ತೆರಿಗೆ ಪಾವತಿ ಮಾಡಿದಲ್ಲಿ 28-2-75 ರ ಮಧ್ಯಾಹ್ನ 1 ಗಂಟೆ ವರೆಗೆ ಕೆಲಸದ ಎಲ್ಲ ದಿನಗಳಲ್ಲಿ ಕಚೇರಿ ಕೆಲಸದ ವೇಳೆಗಳಲ್ಲಿ ಟೆಂಡರ್ ಫಾರಂಗಳನ್ನು ಕೊಡಲಾಗುವುದು.

3 ಯಾವುದೇ ವಿವರಗಳಿಗೆ, ಮೈಸೂರಿನಲ್ಲಿರುವ ಪ್ರಾಜೆಕ್ಟ್ ಟೈಗರ್ ಡೆಪ್ಯುಟಿ ಡೈರೆಕ್ಟರ್ ಇವರೊಡನೆ ಕೆಲಸದ ಎಲ್ಲ ದಿನಗಳಲ್ಲಿ ಡಯಲಿಟ್ಟು ವ್ಯವಹರಿಸಬಹುದಾ.

ಸಹಿ/- ಡೆಪ್ಯುಟಿ ಡೈರೆಕ್ಟರ್.

ತಪ್ಪು ಹೆಜ್ಜೆ

ಪಾಕೀಸ್ತಾನಕ್ಕೆ ಅಮೇರಿಕದ ಅಯುಧ ಪರಬರಾಜು ಅಮೇರಿಕಾದ ತಪ್ಪು ಹೆಜ್ಜೆ, ಇದರಿಂದ ಉಪ ಖಂಡದ ಶಾಂತಿಗೆ ಧಕ್ಕೆ ಉಂಟಾಗುವ ಭಯವಿದೆ ಎಂದು ರಕ್ಷಣಾ ಮಂತ್ರಿ ಶ್ರೀ ವೈ ಬಿ ಚವಾಣ್ ನವ ದೆಹಲಿಯಲ್ಲಿ ತಿಳಿಸಿದರು

★

ಪ್ರಧಾನಿಯೊಡನೆ ಮಾತುಕತೆ

ಭಾರತಕ್ಕೆ ಭೇಟಿ ಇತ್ತಿರುವ ರಷ್ಯನ ರಕ್ಷಣಾ ಮಂತ್ರಿ ಆಂಡ್ರೆ ಗ್ರೆಕೋರವರು ನವ ದೆಹಲಿಯಲ್ಲಿ ಪ್ರಧಾನಿಯವರೊಡನೆ ಮಾತುಕತೆ ನಡೆಸಿದುದರಲ್ಲಿ, ರಕ್ಷಣಾ ಕ್ಷೇತ್ರದಲ್ಲಿ ಹೆಚ್ಚಿನ ಸಹಕಾರ ಕುರಿತು ಮಾತುಕತೆ ಸಹ ಇತ್ತು.

★

ಒಳ್ಳೆಯ ಆಡಳಿತ ಭರವಸೆ

ಕಾಶ್ಮೀರ ಮುಖ್ಯ ಮಂತ್ರಿ ಆಗಿ ಪ್ರಮಾಣ ವಚನ ಸ್ವೀಕರಿಸಿದ ಷೇಖ್ ಅಬ್ದುಲ್ಲರವರು ದೇಶಕ್ಕೆ ಒಳ್ಳೆಯ ಆಡಳಿತ ಭರವಸೆ ನೀಡಿರುವರು.

●

ಶಾಂತ ವಲಯ ಆಗಲಿ

ನೇಪಾಳ ಶಾಂತ ವಲಯ ಆಗಿರಬೇಕೆಂದು ಅಲ್ಲಿನ ಪ್ರಧಾನಿ ಶ್ರೀ ಬೀರೇಂದ್ರ ತಿಳಿಸಿದ್ದಾರೆ ಸಾರ್ಕ ಸಮ್ಮೇಳನದಲ್ಲಿ ತಿಳಿಸಿದರು

★

ರಾಜೀನಾಮೆಗೆ ಒತ್ತಾಯ

ಡಾ. ಕೆ. ಜಿ. ಅಡಿಯೋಡಿ, ಶ್ರೀ ಕೆ. ಕರುಣಾಕರನ್, ಶ್ರೀ ಪಳ್ಳಂ ಪುಕುಟ್ಟಿ ಮತ್ತು ಶ್ರೀ ಕುಂಜಿರಾಮನ್ ಇವರ ರಾಜೀನಾಮೆ ಅಪೇಕ್ಷಿಸಿ ಕೇರಳದ ವಿರೋಧ ಪಕ್ಷಗಳ ವಿಧಾನ ಸಭೆ ಸದಸ್ಯರು ವಿಧಾನ ಸಭೆಯಲ್ಲಿ ಧರಣಿ ಆರಂಭಿಸಿರುವರು.

ಅಶ್ರುವಾಯು ಪ್ರಯೋಗ

ಜನಸಂಘ ಕರೆದಿದ್ದ ಹರತಾಳ ಸಂಬಂಧದಲ್ಲಿ ಗುಂಪುಗಳನ್ನು ಚದುರಿಸಲು ಪೋಲೀಸರು ಅಶ್ರುವಾಯುವನ್ನು ಜಮ್ಮುವಿನಲ್ಲಿ ಪ್ರಯೋಗಿಸಿದರು

●

ಲಂಚ ಇದೆ

ಆರೋಗ್ಯ ಇಲಾಖೆಯಲ್ಲಿ ಲಂಚರುಷವತ್ತು ಇದೆ, ದಾದಿಯ ವರ್ಗಾವಣೆಗೂ ಸಹ ಲಂಚ ತೆಗೆದುಕೊಳ್ಳಲಾಗುತ್ತಿದೆ ಎಂಬುದಾಗಿ ಆಂಧ್ರದ ಆರೋಗ್ಯ ಮಂತ್ರಿ ಶ್ರೀ ಕೆ. ರಾಜಮಲ್ಲು ಹೈದರಾಬಾದಿನಲ್ಲಿ ತಿಳಿಸಿರುವರು

○

ಆಯುಧಗಳ ಲೂಟಿ

ಪಾಟ್ನಾ ಜಿಲ್ಲೆಯ ಪಂಡಾರಕ್ ಬಾಕಿಪುರ ಪೋಲೀಸ್ ಬೆಟ್ ಪೋಸ್ಟ್ ಮೇಲೆ ನಕ್ಸಲಿಗಳೆಂದು ವಿವರಿಸಲಾದ ಸಶಸ್ತ್ರ ಪಾಳಿಕಾರರು ಪಾಳಿ ಮಾಡಿ ಇದ್ದ ಶಸ್ತ್ರಾಸ್ತ್ರಗಳನ್ನೆಲ್ಲ ಅಪಹರಿಸಿದರು

●

ಕೃಷ್ಣಾ ಪ್ರಾಜೆಕ್ಟಿಗೆ ಸಹಾಯ

ವೇಲಿನ ಕೃಷ್ಣಾ ಪ್ರಾಜೆಕ್ಟಿಗೆ ಪ್ರಪಂಚ ಬ್ಯಾಂಕಿನ ಸಹಾಯ ದೊರೆಯುವದು ಪರಿಶೀಲನೆಯಲ್ಲಿದೆ.

●

ಅರಸ್‌ರ ಉತ್ತರ

ವಿರೋಧ ಪಕ್ಷದ ನಾಯಕರು ತಮ್ಮ ಮೇಲೆ ಮಾಡಿದ ಆರೋಪಗಳನ್ನು ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್‌ರು ವಿಧಾನ ಪರಿಷತ್ತಿನಲ್ಲಿ ಪ್ರಸ್ತಾಪಿಸಿ ಅಂಶಂಶವಾಗಿ ಅದಕ್ಕೆ ಉತ್ತರ ಇತ್ತರು

● ರಷ್ಯ ರಕ್ಷಣಾ ನೆಚ್ಚ ಖೋತಾ ... ಡುಲ್ಲೆಂದು ವರದಿಯಾಗಿದೆ.

(2)

ಕಾಂಗ್ರೆಸ್ ಅಧ್ಯಕ್ಷರ ನುಡಿಗಳು

ಪ್ರತಿ ಹಳ್ಳಿಯಲ್ಲೂ ಒಂದು ಕೈಗಾರಿಕೆಯನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಆರಂಭಿಸುವಷ್ಟು ಕಡಿಮೆ ಪಕ್ಷ ಇದರಿಂದ ಇಪ್ಪತ್ತು ಕುಟುಂಬಗಳಿಗೆ ಅನುಕೂಲ ಆಗಬೇಕು. ಈ ವಿಚಾರವನ್ನು ಕೆ ಪಿ ಸಿ ಸಿ ಅಧ್ಯಕ್ಷ ಶ್ರೀ ಹೆಚ್ ಕೆ ಪಾಟೀಲರು ಬೆಂಗಳೂರಿನಲ್ಲಿ ತಿಳಿಸಿದರು

ತಮಗೂ ಹಾಗೂ ಮುಖ್ಯ ಮಂತ್ರಿಯವರಿಗೆ ಭಿನ್ನಾಭಿಪ್ರಾಯವೇನೂ ಇಲ್ಲ ಕೆ ಪಿ ಸಿ ಸಿ ಅಧ್ಯಕ್ಷ ಶ್ರೀ ಪಾಟೀಲರು ಬೆಂಗಳೂರಿನಲ್ಲಿ ತಿಳಿಸಿದರು

ಮಂತ್ರಿಗಳನ್ನು ಒಳಗೊಂಡಂತೆ ಶಾಸಕರು ಆಸ್ತಿ ಸಾಲಗಳ ಘೋಷಣೆ ಮಾಡಬೇಕು ಇಲ್ಲದಿದ್ದವರಿಗೆ ಅಂಥವರಿಗೆ ಚುನಾವಣೆಗೆ ಕಾಂಗ್ರೆಸ್ ಟಿಕೆಟ್ ಕೊಡುವುದಿಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಪಾಟೀಲ್ ಬೆಂಗಳೂರಿನಲ್ಲಿ ತಿಳಿಸಿರುವರು

★

ರಷ್ಯದ ಮಾಜಿ ನಾಯಕ ಬುಲ್ಗಾನಿನ್ 24 ರಂದು ನಿಧನರಾದರೆಂದು ಮಾಸ್ಕೋ ವಾರ್ತೆ.

★

ಜವಹಾರ್ ಹಾಗೂ ಧನಬಾದ ಘಟನೆ ಪ್ರತಿ ಸರ್ಕಾರ ಕಚೇರಿಗೆ ಗಿರಿಜನರನ್ನು ಕ್ರೈಸ್ತಿಯನ್ ಮಿಷನರಿಗಳು ಪ್ರಚೋದನೆ ಮಾಡುತ್ತಿರುವವಾಗಿ ಬಿಹಾರ ವಿಧಾನಸಭೆಯಲ್ಲಿ ತಿಳಿಸಲಾಯಿತು

★

ಕೇಂದ್ರ ಹಿಂದಿ ಡೈರೆಕ್ಟೊರೇಟ್ ಬಳಿ ಮಾರಾಟವಾಗದೆ ಒಂದು ಕೋಟಿ ರೂ. ಪುಸ್ತಕ ಉಳಿದಿದೆ

★

ಮೈಸೂರು ನಗರದಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ 27 ನೇ ತಾರೀಖು ಬೆಳಿಗ್ಗೆ 10 ಗಂಟೆಗೆ ಕರ್ನಾಟಕದ ಮೀನುಗಾರಿಕೆ ಹಾಗೂ ತೋಟಗಾರಿಕೆ ಸಹಾಯ ಮಂತ್ರಿ ಶ್ರೀ ಕೆ ಟಿ ರಾಥೋಡ್‌ರವರು ಸಹಕಾರ ಅಕ್ಕಿ ಕೈಗಾರಿಕೆ ಮೇಲೆ ಅಖಿಲ ಭಾರತ ಸಮ್ಮೇಳನ ಉದ್ಘಾಟಿಸುವರು

●

ಈ ತಿಂಗಳು 28 ನೇ ತಾ|| ಮೈಸೂರು ಜಯಲಕ್ಷ್ಮಿಪುರಂನಲ್ಲಿರುವ ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಆಶ್ರಯದಲ್ಲಿ ಹವ್ಯಕ ಜಾನಪದ ವಿಚಾರಗೋಷ್ಠಿ ಸಂಜೆ 6 ಗಂಟೆಗೆ ಇವೆ ಅಧ್ಯಕ್ಷರು ಶ್ರೀ ಮಳಲಿ ವಸಂತಕುಮಾರ್ ಉಪನ್ಯಾಸಕರು ಶ್ರೀ ನಾಗರಾಜಭಟ್

SHAKTI

SUDHA

A Superb Tonic

Contribute Liberally

to the National Defence Fund

ವುಡ್‌ಲಾಂಡ್ಸ್ 28 2 75 ರಿಂದ

ಅವೋಘ ಆರಂಭ

ದಾರಿ ತಪ್ಪಿದ ಮಗ

ಅಪೂರ್ವ ಕನ್ನಡ ಕಲಾಕೃತಿ ಪಾತ್ರ– ರಾಜಕುಮಾರ್ (ದ್ವಿಪಾತ್ರದಲ್ಲಿ)

ಪಜ್ಯಮುನಿ, ಅಶ್ವತ್ಥ್, ಬಾಲಕೃಷ್ಣ, ಕಲ್ಪನ, ಅರತಿ ದಿನ 6 ಪ್ರದರ್ಶನಗಳು

ಅಪೆರಾ 28.2 75 ರಿಂದ

ದಾವತ್

ಅಮೋಘ ಹಿಂದಿ ಕಲರ್ ಚಿತ್ರ

ಪಾತ್ರ – ಸೈಲೇಶ್ ಕೌಲ್ ಜಯಶ್ರೀ ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ



Protect the Cow

Help The Gorakshana

—Humanitarian Propoganda Monthly—

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore